**File No: DPARAR/39/AKA/2019-DPARAR US WS A-DPAR AR SEC**

**ಕರ್ನಾಟಕ ಸರ್ಕಾರ**

ಸಂಖ್ಯೆ:ಸಿಆಸುಇ 39 ಈಕಾಅ 2019

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:26-11-2019

**ಸುತ್ತೋಲೆ**

ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿ ದಿನಾಂಕ:26.11.2019 ರಿಂದ 14 04 2020 ರ ವರೆಗೆ **"70ನೇ ವರ್ಷದ ಸಂವಿಧಾನದ ದಿನ"** ವನ್ನು ಆಚರಿಸಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಅದರನ್ವಯ ಐದು ತಿಂಗಳಲ್ಲಿ ಪ್ರತಿ ತಿಂಗಳಿಗೆ ಮೂಲಭೂತ ಕರ್ತವ್ಯಗಳಿಗೆ ಸಂಬಂಧಿಸಿದಂತೆ, ಕಾವ್ಯ/ಕವನ ರಚನೆ, ಪ್ರಬಂಧ ಸ್ಪರ್ಧೆ ಹಾಗೂ ವ್ಯಂಗ್ಯ ಚಿತ್ರಗಳ ರಚನೆ ವಿಷಯಗಳಿಗೆ ಸ್ಪರ್ಧೆಗಳನ್ನು ಕರ್ನಾಟಕ ಸರ್ಕಾರ ಸಚಿವಾಲಯದ ಅಧಿಕಾರಿ/ನೌಕರರುಗಳಿಗೆ ಏರ್ಪಡಿಸಿದ್ದು, ಪ್ರತಿ ತಿಂಗಳು ಬೇರೆ ಬೇರೆ ವಿಷಯಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಇ-ಕಛೇರಿಯ ಸೂಚನಾ ಫಲಕದಲ್ಲಿ ಅಳವಡಿಸಲಾಗುವುದು.

ಎರಡನೇಯ ಸ್ಪರ್ಧೆ ರಸಪ್ರಶ್ನೆ ಸ್ಪರ್ಧೆಯಾಗಿದ್ದು, ಸ್ಪರ್ಧೆಯ ವಿಷಯ ಈ ಕೆಳಕಂಡಂತಿದೆ:

1) **ಡಾ: ಬಿ.ಆರ್. ಅಂಬೇಡ್ಕರ್ ರವರ ಜೀವನ ಚರಿತ್ರೆ**
2) **ಭಾರತ ಸಂವಿಧಾನ**

ಈ ಬಗ್ಗೆ ಈಗಾಗಲೇ ಇ-ಕಛೇರಿಯ ಸೂಚನಾ ಫಲಕದಲ್ಲಿ ಪ್ರಚುರಪಡಿಸಲಾಗಿದೆ.

ಸದರಿ ಸ್ಪರ್ಧೆಗೆ ಭಾಗವಹಿಸಲು ಇಚ್ಛಿಸುವ ಅಧಿಕಾರಿ/ನೌಕರರು ಐದು ಜನರನ್ನೊಳಗೊಂಡ ಒಂದು ತಂಡವನ್ನು ರಚಿಸಿಕೊಂಡು ತಮ್ಮ ಹೆಸರುಗಳನ್ನು ಸಿಆಸುಇ (ಆಸು) ಗೆ ನಮೂದುಗಳನ್ನು ಸಲ್ಲಿಸುವುದು

ಸದರಿ ಸ್ಪರ್ಧೆಯನ್ನು **ದಿನಾಂಕ:21.12.2019 ರಂದು ನಡೆಸಲಾಗುವುದು** ಸ್ಥಳ ಮತ್ತು ಸಮಯವನ್ನು ನಂತರ ತಿಳಿಸಲಾಗುವುದು. ನೋಂದಣಿ ಮಾಡಿಕೊಳ್ಳಲು ಇಚ್ಛಿಸುವ ಅಧಿಕಾರಿ/ನೌಕರರು ತಮ್ಮ ತಂಡಗಳನ್ನು ರಚಿಸಿಕೊಂಡು ನಮೂದುಗಳನ್ನು ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ (ಪ್ರತಿ ಲಗತ್ತಿಸಿದೆ) ಇ-ಕಛೇರಿ ಮೂಲಕ **ದಿನಾಂಕ:11.12.2019 ರ ಮಧ್ಯಾಹ್ನ 4.00 ಗಂಟೆಯೊಳಗಾಗಿ** ಸರ್ಕಾರದ ಅಧೀನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ ಸುಧಾರಣೆ-ಕಾರ್ಯಾಧ್ಯಯನ) ಇವರಿಗೆ ಸಲ್ಲಿಸತಕ್ಕದ್ದು.

ಮೊದಲು ನೊಂದಾಯಿಸಲಾದ 10 ತಂಡಗಳಿಗೆ ಆದ್ಯತೆ ನೀಡಲಾಗುವುದು. ಸ್ಪರ್ಧೆಯಲ್ಲಿ ಭಾಗವಹಿಸಿದ 10 ತಂಡಗಳಲ್ಲಿ ಪಡೆದ ಅಂಕಗಳ ಆಧಾರದ ಮೇಲೆ 2ನೇ ಸುತ್ತಿಗೆ 07 ತಂಡಗಳನ್ನು ಆಯ್ಕೆ ಮಾಡಲಾಗುವುದು. ಅಂತಿಮ ಸುತ್ತಿಗೆ 03 ತಂಡಗಳನ್ನು ಆಯ್ಕೆ ಮಾಡಲಾಗುವುದು

N-S Gayathri devi
(ಎನ್. ಎಸ್. ಗಾಯತ್ರಿದೇವಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಆಡಳಿತ ಸುಧಾರಣೆ-ಕಾರ್ಯಾಧ್ಯಯನ)

ಗೆ:
ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು

**ಪ್ರತಿ ಮಾಹಿತಿಗಾಗಿ:**

1) ಸರ್ಕಾರದ ವಿಶೇಷ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ, ವಿಧಾನಸೌಧ
2) ಸರ್ಕಾರದ ಉಪ ಕಾರ್ಯದರ್ಶಿ, ಕಾನೂನು ಇಲಾಖೆ, ವಿಧಾನಸೌಧ
3) ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ
4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಿಆಸುಇ (ಆಸು), ಬಹುಮಹಡಿ ಕಟ್ಟಡ
5) ಸರ್ಕಾರದ ಉಪ ಕಾರ್ಯದರ್ಶಿ, ಸಿಆಸುಇ (ಆಸು), ಬಹುಮಹಡಿ ಕಟ್ಟಡ

**<u>File No:</u>** <u>DPARAR/39/AKA/2019-DPARAR US WS A-DPAR AR SEC</u>

# <u>ನಮೂನೆ</u>

## <u>ತಂಡದ ಹೆಸರು:</u>

| ಕ್ರಮ ಸಂಖ್ಯೆ | ಸ್ಪರ್ಧಿಗಳ ಹೆಸರು | ಪದನಾಮ | ಕರ್ತವ್ಯ ನಿರ್ವಹಿಸುತ್ತಿರುವ ಇಲಾಖೆ | ಮೊಬೈಲ್ ಸಂಖ್ಯೆ | e-mail ID |
|---|---|---|---|---|---|
| 1 | | | | | |
| 2 | | | | | |
| 3 | | | | | |
| 4 | | | | | |
| 5 | | | | | |